

ಚಿತ್ರ : ೧೭

## ಛಾಯಾಚಿತ್ರ–೧೭

ಇದು ವಿಶ್ವಧರ್ಮ ಸಮ್ಮೇಳನ ನಡೆದ ಆರ್ಟ್ ಇನ್‌ಸ್ಟಿಟ್ಯೂಟ್ ಕಟ್ಟಡದ ಎಡಭಾಗದಲ್ಲಿರುವ ನಂ.೧, 'ಕೀಪ್ ಔಟ್' (No 1, Keep Out) ಎಂಬ ಕೋಣೆಯಲ್ಲಿ ಸ್ವಾಮೀಜಿಯವರು ಕಾರ್ಯನಿರತರಾಗಿದ್ದಾಗ ತೆಗೆದ ಚಿತ್ರ. ಇದು ಸಮ್ಮೇಳನದ ಪ್ರತಿನಿಧಿಗಳು ಪರಸ್ಪರ ಭೇಟಿಯಾಗಲು ಕಾದಿರಿಸಿದ್ದ ಸ್ಥಳ. ಈ ಚಿತ್ರವನ್ನು ೧೮೯೩ ಸೆಪ್ಟೆಂಬರ್ ತಿಂಗಳ ಮಧ್ಯಭಾಗದಲ್ಲಿ ತೆಗೆದಿರಬಹುದು ಎಂದು ಊಹಿಸಲಾಗಿದೆ.

ಸ್ವಾಮೀಜಿಯವರ ಹಿಂದೆ ನಿಂತು ಕುತೂಹಲದಿಂದ ನೋಡುತ್ತಿರುವವರು ಮದ್ರಾಸಿನ ನರಸಿಂಹಾಚಾರಿ ಎಂಬ ಯುವಕ. " 'ನರಸಿಂಹಾಚಾರಿ' ಇಲ್ಲೇ ಓಡಾಡಿಕೊಂಡು ಇದ್ದಾನೆ. ನಾನೂ ಅವನನ್ನು ಇಷ್ಟಪಡುತ್ತೇನೆ. ಅವನು ನಿನಗೆ ಪರಿಚಿತನಂತೆ. ಅವನ ಬಗ್ಗೆ ನಿನಗೆ ಗೊತ್ತಿರುವ ಎಲ್ಲ ಮಾಹಿತಿಗಳನ್ನೂ ಬರೆ" ಎಂದು ಅಳಸಿಂಗ ಪೆರುಮಾಳರಿಗೆ ಸ್ವಾಮೀಜಿ ಒಮ್ಮೆ ಪತ್ರ ಬರೆದಿದ್ದರು.


## ಛಾಯಾಚಿತ್ರ–೧೮

ಚರಿತ್ರಾರ್ಹ ವಿಶ್ವಧರ್ಮ ಸಮ್ಮೇಳನದ ಹನ್ನೊಂದನೇ ದಿನದ ಬೆಳಗ್ಗೆ ಅಂದರೆ ೧೮೯೩, ಸೆಪ್ಟೆಂಬರ್ ೨೧ ನೇ ತಾರೀಖು ತೆಗೆದ ಚಿತ್ರ ಇದು. ಜಾನ್ ಹೆನ್ರಿ ಬಾರೋಸ್ ೧೮೯೩ರಲ್ಲಿ ಪ್ರಕಟಿಸಿದ The World's Parliament of Religions ಗ್ರಂಥದ ಮೊದಲನೆಯ ಸಂಪುಟದಲ್ಲಿ ಈ ಚಿತ್ರವನ್ನು ಮುದ್ರಿಸಲಾಗಿದೆ. ಸ್ವಾಮೀಜಿಯವರನ್ನು ಈ ಚಿತ್ರದಲ್ಲಿ ಗುರುತಿಸುವುದು ಬಹಳ ಕಷ್ಟ.

ಅಮೆರಿಕೆಗೆ ಹೊರಡುವ ಮುನ್ನ ಸ್ವಾಮಿ ತುರೀಯಾನಂದರನ್ನು ಭೇಟಿಯಾದಾಗ ತಮ್ಮನ್ನು ತೋರಿಸಿಕೊಂಡು ಸ್ವಾಮಿ ವಿವೇಕಾನಂದರು ಹೀಗೆ ಹೇಳಿದ್ದರು, **"ನೋಡು ಅಲ್ಲಿ ಏನೇನು ವ್ಯವಸ್ಥೆ ನಡೆಯುತ್ತಿದೆಯೋ ಅವೆಲ್ಲ ಇದಕ್ಕಾಗಿಯೇ"** ಎಂದು. ಹೀಗೆ ಸ್ವಾಮೀಜಿ ಹೇಳಿದ್ದುದರಲ್ಲಿ ಯಾವ ಅತಿಶಯೋಕ್ತಿಯೂ ಇಲ್ಲ, ಅಲ್ಲವೇ! ✦



ಚಿತ್ರ : ೧೮



ಸ್ವಾಮಿ ಗೌರಾಂಗಾನಂದ

ಅನುವಾದ: ಡಾ. ರಮಾ ಬೆಣ್ಣೂರ್

# ಕೈಲಾಸ, ಮಾನಸ ಸರೋವರ : ನಿಸರ್ಗದ ಸ್ವರ್ಗೀಯ ನೋಟ

(ಹಿಂದಿನ ಸಂಚಿಕೆಯಿಂದ)

## ತಕ್ಲಾಕೋಟ್ – ರಾಕ್ಷಸ ತಾಲ್


ಇಡೀ ಪ್ರಯಾಣದಲ್ಲಿ ಸ್ಮರಣೀಯವಾದ ದಿನ ಇದು. ಏಕೆಂದರೆ ಯಾತ್ರಾರ್ಥಿಗಳು ಕೈಲಾಸ, ಮಾನಸ ಸರೋವರದ ಮೊದಲ ಕ್ಷಣದ ದರ್ಶನಕ್ಕಾಗಿ ಕಾತರದಿಂದ ಎದುರುನೋಡುತ್ತಿರುತ್ತಾರೆ. ೧೪೦ ಕಿ.ಮೀ. ದೂರದಲ್ಲಿರುವ ದಾರ್ಚೆನ್ ಎಂಬ ಸ್ಥಳಕ್ಕೆ ನಮ್ಮ ಪಯಣ. ಇದು ಕೈಲಾಸ ಪರಿಕ್ರಮದ ಬೇಸ್ ಕ್ಯಾಂಪ್. ಮಾಂಧಾತ ಪರ್ವತವನ್ನು ದಾಟಿದ ನಂತರ ಯಾತ್ರಿಗಳು ತಮ್ಮ ಎಡಬದಿಯಲ್ಲಿ 'ರಾಕ್ಷಸ ತಾಲ' ದ (ರಾಕ್ಷಸ ಸರೋವರ) ಇಣುಕುನೋಟವನ್ನು ಕಾಣುತ್ತಾರೆ. ಇದೀಗ ಅವರು 'ರಾಕ್ಷಸ ತಾಲ' ಅಥವಾ 'ರಾವಣ ತಾಲ'ದ ಬದಿಯಲ್ಲಿದ್ದಾರೆ.

ಸಾಮಾನ್ಯವಾಗಿ ರಾವಣನನ್ನು ನಾವು ಲಂಕಾಧಿಪತಿಯಾದ ರಾಕ್ಷಸ ಎಂದು ಭಾವಿಸುತ್ತೇವೆ. ಆದರೆ ಅವನು ಮಹಾನ್ ಶಿವಭಕ್ತನೂ ಆಗಿದ್ದ ಎಂಬುದನ್ನು ಮರೆತುಬಿಡುತ್ತೇವೆ. ಶಿವನನ್ನು ಒಲಿಸಲು ತನ್ನ ಶಿರಗಳನ್ನೇ ಅರ್ಪಿಸಿದಂತಹ ಮಹಾನ್ ಭಕ್ತ ಅವನು. ಅಲ್ಲದೆ ಈ ರಾಕ್ಷಸ ತಾಲವು ಮಾನಸ ಸರೋವರದ ಉದ್ದಕ್ಕೂ ಇರುವ ಜೋಡಿ ಕೆರೆ ಅಥವಾ ಸರೋವರವಾಗಿದೆ. ಭಸ್ಮಾಸುರನು ತನ್ನನ್ನು ಭಸ್ಮವಾಗಿಸಿಕೊಂಡ ಜಾಗವೂ ಇದೇ.

## ಕೈಲಾಸದ ದರ್ಶನ

ಪರ್ವತದಿಂದ ಇಳಿದು ದಾರಿಯುದ್ದಕ್ಕೂ ಹರಿಯುವ ಅನೇಕ ಝರಿಗಳನ್ನು ದಾಟುತ್ತಾ, ಟಿಬೆಟ್ ತಪ್ಪಲು ಪ್ರದೇಶವನ್ನು ಕ್ರಮಿಸುತ್ತಿದ್ದಂತೆಯೇ ಮೋಡಗಳು ಚದುರಿ ಶುಭ್ರಾಕಾಶ ಮೂಡುತ್ತದೆ; ಹಿಮಾಚ್ಛಾದಿತವಾದ ಒಂದು ಭವ್ಯ ಪರ್ವತದ ದರ್ಶನ ಆಗುತ್ತದೆ. ಇದೇ ಕೈಲಾಸ ಪರ್ವತದ ಪ್ರಥಮ ದರ್ಶನ. ಭಾವೋದ್ವೇಗದಿಂದ ಕೂಡಿದ ಯಾತ್ರಿಗಳು 'ಹರ ಹರ ಮಹಾದೇವ' ಎಂದು ಘೋಷಣೆ ಮಾಡುತ್ತಾರೆ. ಇಲ್ಲಿಂದ ಮಾನಸ ಸರೋವರದ ಒಂದು ನೋಟ ಲಭ್ಯವಾಗಿ ಭಾವದುಂಬಿದ ಮನದಿಂದ ಕೈಲಾಸ ಪರಿಕ್ರಮಕ್ಕೆ ಸಿದ್ಧರಾಗುತ್ತಾರೆ. ಮುಂದೆ ದಾರ್ಚೆನ್ ಬೇಸ್ ಕ್ಯಾಂಪಿನಲ್ಲಿ ವಿಶ್ರಮಿಸುತ್ತಾರೆ. ಕೈಲಾಸ ಪರಿಕ್ರಮಕ್ಕಾಗಿ ಅವರು ಇಲ್ಲಿ ಹವಾಮಾನದ ಅಂತಿಮ ಕಠಿಣ ಪರೀಕ್ಷೆಗೆ ತಮ್ಮನ್ನು ತಾವು ಒಡ್ಡಿಕೊಳ್ಳಬೇಕಾಗುತ್ತದೆ. ಇಳಿದುಕೊಂಡ ಸ್ಥಳವು ಆರಾಮವಾಗಿದ್ದು ದಣಿದ ದೇಹಗಳಿಗೆ ವಿಶ್ರಾಂತಿ ಸಿಗುತ್ತದೆ. ಮಾಂಧಾತ ಪರ್ವತದ ನೋಟವೂ ಇಲ್ಲಿ ಕಾಣಸಿಗುತ್ತದೆ. ದಣಿವನ್ನು ಲೆಕ್ಕಿಸದ ಯಾತ್ರಿಕರ ಮನಸ್ಸು ಪವಿತ್ರ ಬೆಟ್ಟದ ಮೇಲೆ ಕಾಲೂರಲು ತವಕಿಸುತ್ತದೆ.

ಪರಿಕ್ರಮದ ಹಾದಿ ಸುಮಾರು ೫೪ ಕಿ.ಮಿ. ದೂರ. ಅದರಲ್ಲಿ ೧೦ ಕಿ.ಮೀ. ಗಳನ್ನು ಯಾತ್ರಿಗಳು ಬಸ್ಸಿನಲ್ಲಿ ಕ್ರಮಿಸುತ್ತಾರೆ. ಮಿಕ್ಕದ್ದನ್ನು ನಡೆದೇ ತೀರಬೇಕು. ಈಗ ಅವರು



ದಾರ್ಚೆನ್

ತಾರ್–ಪೊ–ಚೆ ಅಥವಾ ದೇವನ ಕಣಿವೆಯಲ್ಲಿದ್ದಾರೆ. ಪ್ರಾರ್ಥನಾ ಧ್ವಜಕ್ಕೆ ನಮಿಸಿ ಅಷ್ಟಪಾದ ಎಂದೂ ಕರೆಯಲ್ಪಡುವ ಕೈಲಾಸದ ದಕ್ಷಿಣಮುಖಕ್ಕೆ ವಂದಿಸಿ, ಕೆಲವೇ ಗಜಗಳಷ್ಟು ಮುಂದೆ ಇರುವ ಯಮದ್ವಾರವನ್ನು ತಲಪುತ್ತಾರೆ. ಯಮ ರಾಜನ ದಿವ್ಯ ದರ್ಬಾರಿನ ಸಂಕೇತದಂತಿದೆ ಈ ಸ್ಥಳ. ತಮ್ಮ ತಪ್ಪುಗಳನ್ನು ಮನ್ನಿಸಿ ಕೈಲಾಸಕ್ಕೆ ಹೋಗಲು ಅಪ್ಪಣೆ ನೀಡೆಂದು ಯಾತ್ರಿಗಳು ಯಮರಾಜನನ್ನು ಬೇಡಿಕೊಂಡು ಇಲ್ಲಿಂದ ಮುಂದುವರೆಯುತ್ತಾರೆ. ಅನಂತರ ಕುಬೇರನ ಯಕ್ಷಪುರಿಯನ್ನೂ ದಾಟುತ್ತಾರೆ. ಶಿವನ ಖಜಾಂಚಿಯಾದ ಈತನು ಅಪರಿಮಿತ ಸಂಪತ್ತನ್ನು ನೀಡಲು ತಯಾರಾಗಿರುತ್ತಾನೆ. ಆದರೆ ಅದನ್ನು ಪಡೆದಲ್ಲಿ, ಮುಂದಿನ ಕೈಲಾಸ ಅಥವಾ ಸ್ವರ್ಗದ ಪಯಣವನ್ನು ಕೈಬಿಡಬೇಕಾದೀತು. ಏಕೆಂದರೆ ಕೈಲಾಸದಲ್ಲಿ ಯಾವುದೇ ಐಶ್ವರ್ಯ, ವೈಭೋಗಗಳಿಲ್ಲ. ಶಿವನು ತ್ಯಾಗದ ಸಂಕೇತವೇ ಹೊರತು ಭೋಗದ ಸಂಕೇತವಲ್ಲ. ಕೈಲಾಸ ಶಿಖರಕ್ಕೆ ತುಸು ಮೊದಲು ನಂದಿ ಪರ್ವತವಿದೆ. ಶಿವನ ಸ್ವಾಮಿನಿಷ್ಠ ಅನುಚರನಾದ ನಂದಿಯು ಸದಾ ಶಿವನನ್ನು ಕಾಯುವ ಕಾಯಕದಲ್ಲಿ ಮಗ್ನನಾಗಿರುತ್ತಾನೆ. ಶಿವನ ಎಲ್ಲ ದೇವಸ್ಥಾನಗಳಲ್ಲಿಯೂ ಗರ್ಭಗೃಹದ ಮುಂದೆ ಇರುವ ನಂದಿ ವಿಗ್ರಹವನ್ನು ನೋಡಬಹುದು. ಕೈಲಾಸದಲ್ಲಿ ಶಿವನು ತನ್ನ ಸಂಗಾತಿ ಉಮೆಯೊಡನಿರುತ್ತಾನೆ. ಅವನು ಪರಮಾತ್ಮನಾದರೆ, ಪಾರ್ವತಿಯು ಪರಿಶುದ್ಧ ಮನಸ್ಸಿನ ಸಂಕೇತ. ಅವನು ಶುದ್ಧ ಜ್ಞಾನವಾದರೆ ಪ್ರಕೃತಿ ಅಥವಾ ಪಾರ್ವತಿಯು ಮಾಯೆಯ ಸಂಕೇತ.

ಶಿವನು ಮಂಗಳಕರ, ಶಾಂತಸ್ವರೂಪಿ. ಅವನು **'ಆಶು ತೋಷ'** ಅಂದರೆ ಅಲ್ಪದರಲ್ಲೇ ತೃಪ್ತಿಪಡುವವನು. ಭಕ್ತಿ ಯಿರಲಿ, ಕಾಣಿಕೆಯಿರಲಿ, ಶಿವನು ತನ್ನ ಭಕ್ತರಿಂದ ಏನನ್ನೂ ಬಯಸುವುದಿಲ್ಲ. ಅವರು ಏನೇ ಕೊಟ್ಟರೂ ತುಂಬು ಹೃದಯದಿಂದ ಸ್ವೀಕರಿಸಿ ಮನಃಪೂರ್ವಕವಾಗಿ ಆಶೀರ್ವದಿಸುತ್ತಾನೆ. ಕ್ರಿಮಿಕೀಟಗಳಿಂದ ಹಿಡಿದು ರಾಕ್ಷಸರವರೆಗೆ, ಮನುಷ್ಯರಿಂದ ಹಿಡಿದು ದೇವರವರೆಗೆ ಎಲ್ಲರೂ ಅವನನ್ನು ಪೂಜಿಸುತ್ತಾರೆ. ಅವನು ಎಲ್ಲರ ಪ್ರೀತಿಯ ದೈವ. ಅವನ ಸರಳತೆಗೆ ವಿಶೇಷ ಪೂಜೆಯಾಗಲಿ, ಕಠಿಣ ಸಾಧನೆಗಳಾಗಲಿ ಬೇಕಿಲ್ಲ. ಕೇವಲ ಬಿಲ್ವಪತ್ರೆಗಳಿದ್ದರೆ ಅಷ್ಟೇ ಸಾಕು. ಅಷ್ಟಕ್ಕೇ ಆ ಕಲ್ಪತರುವು ಭಕ್ತರಿಗೆ ಒಲಿಯುತ್ತಾನೆ. ಅಮರತ್ವ ಒಂದನ್ನು ಬಿಟ್ಟು ಬೇರೆ ಏನು ಬೇಕಾದರೂ ನೀಡಿಬಿಡುತ್ತಾನೆ. ಈ ಪರಿಕ್ರಮದಲ್ಲಿ ಯಾತ್ರಿಗಳು ಕೈಲಾಸ ಪರ್ವತದ ವಿವಿಧ ಮುಖಗಳನ್ನು ದರ್ಶಿಸುತ್ತಾರೆ. ದಕ್ಷಿಣಮುಖವು ಸಂಪೂರ್ಣವಾಗಿ ಹಿಮದಿಂದ ಆವೃತವಾಗಿರುವುದರಿಂದ ಗಾಂಭೀರ್ಯ ಅಥವಾ ಭವ್ಯತೆಯನ್ನೂ, ಪಶ್ಚಿಮದ ಮುಖವು ಔದಾರ್ಯ ಮತ್ತು ಕರುಣೆಯನ್ನೂ, ಉತ್ತರದ ಮುಖವು ಕಷ್ಟಸಾಧ್ಯವಾಗಿದ್ದು ಅಂಜಿಕೆ ಹಾಗೂ ಕಾಠಿಣ್ಯವನ್ನೂ ಮತ್ತು ಪೂರ್ವದ ಮುಖವು ನಿಗೂಢತೆಯನ್ನೂ ಪ್ರತಿನಿಧಿಸುತ್ತವೆ. ಬಲು ದೂರ ದವರೆಗೂ ಕಾಣುವ ಕೈಲಾಸಪರ್ವತವು 'ಕಾಲ' ಅಥವಾ 'ಸಮಯ' ವನ್ನು ಸಂಕೇತಿಸುತ್ತದೆ.

ಈಗ ಕೈಲಾಸಪರ್ವತದ ಮೊದಲ ದಿನದ ಪ್ರಯಾಣದ ಮಧ್ಯದಲ್ಲಿರುವ ಯಾತ್ರಿಗಳು, ಇನ್ನು ಮೂರು ತಾಸಿನಲ್ಲಿ ಪಿರಮಿಡ್ ಆಕಾರದ ಅದರ ಪಶ್ಚಿಮದ ಮುಖವನ್ನು ದರ್ಶಿಸ ಲಿದ್ದಾರೆ. ಇಲ್ಲಿನ ಮತ್ತೊಂದು ಕುತೂಹಲಕಾರಿ ಹೆಗ್ಗುರುತೆಂದರೆ **ದೂಧ್ ಗಂಗಾ**. ಇಲ್ಲಿಯೇ ಗಂಗಾಮಾತೆಯು ಶಿವನ ಜಟೆ ಯಿಂದ ಹರಿದು ಮಾನಸ ಸರೋವರದಲ್ಲಿ ಬೀಳುವಳಂತೆ. ಮಹಾಭಾರತದಲ್ಲಿ ಹೇಳಿದಂತೆ ಪಾಶುಪತಾಸ್ತ್ರವನ್ನು ಪಡೆಯಲು ಶಿವನನ್ನು ಪ್ರಾರ್ಥಿಸಲೆಂದು ಅರ್ಜುನ ಮತ್ತು ಶ್ರೀಕೃಷ್ಣರು ಇಲ್ಲಿಗೆ ಬಂದಿದ್ದರೆಂಬ ಐತಿಹ್ಯವಿದೆ. ಇಂತಹ ಪವಿತ್ರ ತಾಣಕ್ಕೆ ಬರುವುದೆಂದರೆ ಅದೊಂದು ಅವಿಸ್ಮರಣೀಯವಾದ ಅನು ಭವವೇ ಸರಿ.

'ಶಿವ' ಎಂದರೆ ಮಂಗಳಕರ. ಅವನು ಮಹಾದೇವನೂ ಹೌದು. ಅವನು ಕಾಲವನ್ನು ನಿಯಂತ್ರಿಸುವ ಮಹಾಕಾಲನೂ ಆಗಿದ್ದಾನೆ; ಹಾಗೆಯೇ ಅವನು ರಕ್ಷಕನೂ ಮತ್ತು ಶಿಕ್ಷಕನೂ ಆಗಿದ್ದಾನೆ. ಅವಿದ್ಯೆಯನ್ನು ಹೋಗಲಾಡಿಸಿ ಜೀವಿಗೆ ಮುಕ್ತಿ ಕೊಡುವವನೂ ಅವನೇ. ಧ್ಯಾನದ ಅತ್ಯುನ್ನತ ಸಂಕೇತವಾಗಿರುವ ಅವನನ್ನು ಸಾಮಾನ್ಯವಾಗಿ ಧ್ಯಾನಭಂಗಿಯಲ್ಲಿ ಚಿತ್ರಿಸಿರುತ್ತಾರೆ. ನಟರಾಜನಾಗಿ ಅಜ್ಞಾನವೆಂಬ ಅಸುರನ ಮೇಲೆ ನರ್ತಿಸುತ್ತ, ಭಕ್ತರಿಗೆ ಅವನು ವಿವೇಕವನ್ನು ದಯಪಾಲಿಸುತ್ತಾನೆ. ಅವನ ಆವಾಸಸ್ಥಾನದಲ್ಲಿ ಹೆಜ್ಜೆ ಹಾಕುವುದೆಂದರೆ ಅದೊಂದು ಆಹ್ಲಾದ ಕರ ಅನುಭವವೇ ಸರಿ. ಪ್ರಚಂಡ ಹಿಮಾಲಯದ ದಿವ್ಯ ಮೌನದ ಏಕಾಂತದಲ್ಲಿ ಧ್ಯಾನಮಾಡುತ್ತಾ, ಕೈಲಾಸನಾಥನ ದರ್ಶನ ಮಾಡುವುದೆಂದರೆ ಅದು ಭಗವಂತನ ದರ್ಶನಕ್ಕೆ ಸಮನೆನಿಸುತ್ತದೆ.

ಮೂರು ಗಂಟೆಗಳ ನಡಿಗೆಯ ನಂತರ ಯಾತ್ರಿಗಳು ಪರಿಕ್ರಮದ ಮೊದಲ ರಾತ್ರಿಯ ವಿಶ್ರಾಂತಿಗಾಗಿ **ದೆರಾಪುಖ್** ಅನ್ನು ತಲಪುತ್ತಾರೆ. ಇಲ್ಲಿಂದ ಕೈಲಾಸದ ಉತ್ತರ ಮುಖ ಅಥವಾ ಸುವರ್ಣ ಕೈಲಾಸವನ್ನು ವೀಕ್ಷಿಸುತ್ತಾರೆ. ಸಾರ್ಥಕ ಭಾವದಿಂದ ಮಂತ್ರಮುಗ್ಧರಾದ ಅವರ ಕಂಗಳಿಂದ ಕಣ್ಣೀರು


ಸುವರ್ಣ ಕೈಲಾಸ

ಹರಿಯುತ್ತದೆ. ಸ್ವರ್ಗದಿಂದ ಭೂಮಿಯ ಮೇಲೆ ಹರಿದ ಭಗವಂತನ ಕೃಪಾಕಟಾಕ್ಷವು, ಈ ಎರಡು ವಾರಗಳಲ್ಲಿ ಅವರು ಎದುರಿಸಿದ ಎಲ್ಲ ಕಷ್ಟಗಳನ್ನೂ ಮರೆಸಿಬಿಡುತ್ತದೆ. ಪವಿತ್ರ ಪರ್ವತದ ದೃಶ್ಯವನ್ನು ಕಣ್ಣುಗಳು ಎಷ್ಟು ಹೀರಿಕೊಂಡರೂ ತೃಪ್ತಿಯಾಗುವುದಿಲ್ಲ. ಒಂದು ಕ್ಷಣವನ್ನೂ ವ್ಯರ್ಥ ಮಾಡ ಲಿಚ್ಛಿಸದೆ ಅವರು ಸಾಮಾನುಗಳನ್ನು ಅತಿಥಿಗೃಹದಲ್ಲಿಟ್ಟು, ದೇವಾಧಿದೇವನಾದ ಆ ಮಹಾದೇವನಿಗೆ ಪೂಜೆ, ಹೋಮ, ಆರತಿ, ತರ್ಪಣ ನೀಡಲು ಧಾವಿಸುತ್ತಾರೆ. ಆ ಮೂಲಕ ತಮಗೆ ಅನಂತವಾದ ಆನಂದವನ್ನು ಪಡೆಯಲು ದಾರಿತೋರೆಂದು ಕೈಲಾಸನಾಥನನ್ನು ಪ್ರಾರ್ಥಿಸುತ್ತಾರೆ.

### ಡೋಲ್ಮಾ ಪಾಸ್ – ಗೌರೀಕುಂಡ

ಪರಿಕ್ರಮದ ಎರಡನೆಯ ದಿನದಂದು ಯಾತ್ರೆಯ ಅತಿ ಕಠಿಣ ಮಾರ್ಗವನ್ನು ಹಾದುಹೋಗಬೇಕಾಗುತ್ತದೆ. ೨೪ ಕಿ.ಮೀ.ಗಳ ನಡಿಗೆಯಲ್ಲದೆ ೧೯,೫೦೦ ಅಡಿಯಷ್ಟು ಎತ್ತರವನ್ನು ಹತ್ತಿ ಡೋಲ್ಮಾ ಪಾಸನ್ನು ಮುಟ್ಟಬೇಕು. ಹವಾಮಾನ ವೈಪರೀತ್ಯದ ಕಾರಣಕ್ಕಾಗಿ ಈ ಅತ್ಯಂತ ಎತ್ತರದ ಡೋಲ್ಮಾ ಪಾಸ್ ಅನ್ನು ಮಧ್ಯಾಹ್ನಕ್ಕೆ ಮೊದಲೇ ತಲಪುವಂತೆ ಆಯೋಜಿಸಲಾಗಿರುತ್ತದೆ. ಯಾತ್ರಿಗಳು ಒಬ್ಬರಿಗೊಬ್ಬರು ಧೈರ್ಯ ತುಂಬುತ್ತಾ, ಆತ್ಮವಿಶ್ವಾಸವನ್ನು ಹೆಚ್ಚಿಸಿಕೊಳ್ಳುತ್ತಾ, ಚಾರಣವನ್ನು ಪೂರ್ಣಗೊಳಿಸಲು ಪರಸ್ಪರ ನೆರವಾಗುತ್ತಾರೆ. ಪಾರ್ವತೀದೇವಿಯು ಕಠಿಣ ತಪಸ್ಸನ್ನು ಮಾಡಿದ ಸ್ಥಳ ಇದು. ಆದ್ದರಿಂದ ಈ ಬಂಡೆಯನ್ನೇ 'ದೇವಿ' ಎಂದು ಭಾವಿಸಲಾಗಿದೆ. ಇದ್ದಕ್ಕಿದ್ದಂತೆ ಸುರಿದ ಹಿಮವು ಯಾತ್ರಿಗಳಿಗೆ ಭಗವಂತನ ಆಶೀರ್ವಾದವೇ ಈ ರೂಪದಲ್ಲಿ ವರ್ಷಿಸಿದೆಯೇನೋ ಎಂಬಂತೆ ಮನಸ್ಸಿನಲ್ಲಿ ಪುಣ್ಯಭಾವನೆಯನ್ನು ಮೂಡಿಸುತ್ತದೆ; ಈ ಪವಿತ್ರ ತಾಣಕ್ಕೆ ಬಂದ ತಮ್ಮ ಮೇಲೆ ದೇವಾಧಿದೇವನ ಸ್ವಾಗತವು ಸಿಂಚನವಾಗುತ್ತಿದೆ ಎಂಬ ಕೃತಾರ್ಥಭಾವನೆಯೂ ಉಂಟಾಗುತ್ತದೆ. ಇದರ ಸಮೀಪದಲ್ಲೇ ಗೌರೀಕುಂಡವಿದೆ. ಮಾತೆ ಪಾರ್ವತಿಯು ಸ್ನಾನ ಮಾಡುತ್ತಿದ್ದ ಈ ಸರೋವರವು ಈಗ ಹೆಪ್ಪುಗಟ್ಟಿದೆ. ೫,೬೦೮ ಅಡಿಗಳಷ್ಟು ಕೆಳಗೆ ಇರುವ 'ಕರುಣಾ ಸರೋವರ'ವು ಗಣೇಶನಿಗೆ ಆನೆಯ ಮುಖವು ಪ್ರಾಪ್ತವಾದ ಸ್ಥಳ. ಪಾರ್ವತಿಯು ಶಕ್ತಿಸ್ವರೂಪಿಣಿ; ಇಡೀ ಸೃಷ್ಟಿಯು ಆಕೆಯಿಂದಲೇ ಹೊರಬಂದಿದೆ. ಆಕೆಯೇ ಅಂಬಿಕೆ, ಜಗನ್ಮಾತೆ ಹಾಗೂ ಗೌರಿ ಕೂಡ. ಕಾರುಣ್ಯಮೂರ್ತಿಯಾದ ಆಕೆಗೆ ಭೀತಿ ಹುಟ್ಟಿಸುವ ಕಾಳಿ ಹಾಗೂ ದುರ್ಗೆಯರ ರೂಪವೂ ಇದೆ. ದೇವದೇವನ ಕೈಹಿಡಿದ ಪಾರ್ವತಿ ದಿವ್ಯಸ್ವರೂಪಿಣಿ.

### ಜಂಗ್‌ಜೆರುಬು

ಸುಮಾರು ನಾಲ್ಕು ತಾಸುಗಳ ಕಡಿದಾದ ಅವರೋಹಣದ ನಂತರ ಯಾತ್ರಿಗಳು ಜಂಗ್‌ಜೆರುಬುವನ್ನು ಸೇರುತ್ತಾರೆ. ಎರಡನೆಯ ರಾತ್ರಿಯ ತಂಗುದಾಣವಿದು. ರಾತ್ರಿಯೆಲ್ಲಾ ಹಿಮ ಸುರಿದಿದೆ. ಮುಂಜಾನೆ ಎಲ್ಲೆಲ್ಲೂ ಹರಡಿರುವ ಬಿಳಿಯ ಹಿಮವು ಅಚ್ಚರಿಯನ್ನುಂಟುಮಾಡುತ್ತದೆ. ಕೊನೆಯ ಘಟ್ಟದ ಪ್ರಯಾಣವನ್ನು ಮುಂದುವರೆಸಿದಂತೆ ಹಿಮಪಾತವು ಕಡಿಮೆಯಾಗುತ್ತಾ, ಮೋಡಗಳ ಮರೆಯಿಂದ ಸೂರ್ಯನು ಇಣುಕಿನೋಡುತ್ತಾನೆ. ಯಾವುದೇ ತೊಂದರೆ ಇಲ್ಲದೆ ಯಾತ್ರಿಗಳು ಕೈಲಾಸ ಪರ್ವತದ ಪರಿಕ್ರಮವನ್ನು ಮುಗಿಸಿ, ತಮ್ಮ ಅನುಭವವನ್ನು ಮೆಲುಕು ಹಾಕುವ ಕಾಲ ಇದು. ಸಂಸಾರದ ಏಳುಬೀಳುಗಳಂತೆಯೇ ಈ ಯಾತ್ರಾಕಾಲದಲ್ಲೂ ಅವರಿಗೆ ಮಿಶ್ರ ಅನುಭವವಾಗಿದೆ. ಭಗವಂತನ ಕೃಪೆಯಿಂದ ಕ್ಷೇಮವಾಗಿ ಮುಕ್ತಾಯಗೊಂಡ ಈ ಪರಿಕ್ರಮಕ್ಕಾಗಿ ಅವರ ಶಿರಗಳು ಶಿವ ಮಹಾದೇವನಿಗೆ ಕೃತಜ್ಞತೆಯಿಂದ ಬಾಗುತ್ತವೆ. ದಾರ್ಚೆನ್


ಗೌರೀಕುಂಡ

ನಲ್ಲಿರುವಾಗ ಭಕ್ತರು ದರ್ಶಿಸಲೇಬೇಕಾದ ಸ್ಥಳವೆಂದರೆ ತೀರ್ಥಪುರಿ. ಶಿವನು ಭಸ್ಮಾಸುರನನ್ನು ಸಂಹರಿಸಿದ ತಾಣ ಇದು. ಇಲ್ಲಿಗೆ ಹೋಗದಿದ್ದರೆ ಕೈಲಾಸ ಪರಿಕ್ರಮವು ಅಪೂರ್ಣ ಎಂಬ ಭಾವನೆಯಿದೆ.

## ಮಾನಸ ಸರೋವರ

ಈಗ ಯಾತ್ರಿಗಳು ಮಾನಸ ಸರೋವರದ ಪರಿಕ್ರಮಕ್ಕಾಗಿ ಎದುರು ನೋಡುತ್ತಾರೆ. ಈ ಸರೋವರವು ಸಮುದ್ರದ ಮಟ್ಟದಿಂದ ೧೫,೦೦೦ ಅಡಿಗಳಷ್ಟು ಎತ್ತರದಲ್ಲಿದೆ. ಇದು ೩೦೦ ಅಡಿ ಆಳ ಮತ್ತು ೮೮ ಕಿ.ಮೀ. ಸುತ್ತಳತೆ ಹೊಂದಿದೆ. ಯಾತ್ರಿಗಳು ಮೂರು ದಿನಗಳಲ್ಲಿ ೮೮ ಕಿ.ಮೀ. ದೂರವನ್ನು ಕ್ರಮಿಸಬೇಕು. ಈ ಪಯಣದ ಹಾದಿಯಲ್ಲಿ **ಹೋರೆ, ಛಿಯು** ಮತ್ತು **ಝ್ಯುದಿ**ಯಲ್ಲಿ ಅವರು ತಂಗುವರು. ನೀಲವರ್ಣದ ತಿಳಿನೀರಿನ ಈ ಮಾನಸ ಸರೋವರವು ನೋಡಲು ಅತಿ ಸುಂದರವಾದುದು. ಇದರ ನೀರು ಔಷಧೀಯ ಗುಣಗಳನ್ನು ಹೊಂದಿದೆ. ದೇವತೆಗಳು, ಋಷಿಗಳು, ಗಂಧರ್ವರು, ಯಕ್ಷರು ಮುಂತಾದ ದೇವತೆಗಳಿಗಾಗಿ ಸಾಕ್ಷಾತ್ ಬ್ರಹ್ಮನಿಂದ ನಿರ್ಮಿತವಾದುದರಿಂದ, ಈ ಸರೋವರವು ಪವಿತ್ರವಾದುದು ಎಂಬ ನಂಬಿಕೆ ಇದೆ. ಇದರಲ್ಲಿ ವೇದಗಳ ಸಾರವೇ ಅಡಗಿದೆಯಂತೆ. ಮಾತೆ ಪಾರ್ವತಿಯ


ಮಾನಸ ಸರೋವರ

ಪವಿತ್ರರೂಪವಿದು. ದಕ್ಷಯಜ್ಞದ ನಂತರ ನಾರಾಯಣನು ತನ್ನ ಸುದರ್ಶನಚಕ್ರದಿಂದ ಸತಿಯ ದೇಹವನ್ನು ಕತ್ತರಿಸಿದಾಗ ಅವಳ ಬಲಗೈ ಇಲ್ಲಿ ಬಿದ್ದುದರಿಂದ, ಮಾನಸ ಸರೋವರ ೫೧ ಶಕ್ತಿಪೀಠಗಳಲ್ಲಿ ಒಂದೆನಿಸಿದೆ.

೪೦ ಕಿ.ಮೀ. ನಡಿಗೆಯ ನಂತರ ಯಾತ್ರಿಗಳು ಸಂಜೆಯ ವೇಳೆಗೆ ಹೋರೆ ಕ್ಯಾಂಪನ್ನು ತಲುಪುತ್ತಾರೆ. ಇಲ್ಲಿಂದ ಮಾನಸ ಸರೋವರದ ಪರಿಕ್ರಮವು ಆರಂಭವಾಗುತ್ತದೆ. ಪ್ರಾಚೀನ ಕಾಲದಲ್ಲಿ ಭಗೀರಥನ ಪ್ರಾರ್ಥನೆಯಂತೆ ಗಂಗೆಯು ಭೂಮಿಗೆ ಇಳಿದು ಬಂದಾಗ ಬಹಳ ರಭಸದಿಂದ ಹರಿಯುತ್ತಿದ್ದಳಂತೆ. ಆ ಮಹಾರಭಸವನ್ನು ಹಿಡಿತದಲ್ಲಿರಿಸಲು ಶಿವನೇ ಇಡೀ ಗಂಗೆಯನ್ನು ತನ್ನ ಜಟೆಯಲ್ಲಿ ಬಂಧಿಸಿದನಂತೆ. ಭಗೀರಥನ ಕೋರಿಕೆಗೆ ಮನ್ನಿಸಿ ಅವಳನ್ನು ಬಿಟ್ಟಾಗ, ಅವನ ಪಾದದ ಮೇಲೆ ಬಿದ್ದು ಪವಿತ್ರಳಾದ ಗಂಗೆಯು **ದೂಧ್ ಗಂಗಾ** ಆಗಿ ಮಾನಸ ಸರೋವರಕ್ಕೆ ಇಳಿದಳಂತೆ. ಭೂಮಿಯನ್ನು ಪವಿತ್ರಗೊಳಿಸುವ ತನ್ನ ಕಾಯಕವನ್ನು ನೆನೆದು ಗಂಗಾಮಾತೆಯು ಮಾನಸ ಸರೋವರದಿಂದ ನಾಲ್ಕು ದಿಕ್ಕುಗಳಲ್ಲಿಯೂ ಹರಿಯುತ್ತಾಳೆ. ಪೂರ್ವದಲ್ಲಿ ಅವಳನ್ನು **'ಬ್ರಹ್ಮಪುತ್ರ'** ಎಂದೂ, ಪಶ್ಚಿಮದಲ್ಲಿ **'ಸಟ್ಲೆಜ್'** ಎಂದೂ, ಉತ್ತರದಲ್ಲಿ **'ಸಿಂಧು'** ಎಂದೂ, ದಕ್ಷಿಣದಲ್ಲಿ **'ಕರ್ನಾಲಿ'** ಎಂದು ಅಕೆಯನ್ನು ಕರೆಯುತ್ತಾರೆ. ಆಕೆ ಗುಪ್ತಗಾಮಿನಿಯಾಗಿ ಹಿಮಾಲಯವನ್ನು ದಾಟಿ ಗಂಗೋತ್ರಿಯಲ್ಲಿ ಮತ್ತೆ ಕಾಣಿಸಿಕೊಂಡು, **'ಭಾಗೀರಥಿ'** ಯಾಗಿ ಹರಿಯುತ್ತಾಳೆ.

ಯಾತ್ರಿಗಳು ಮಾನಸ ಸರೋವರದ ಪರಿಕ್ರಮದ ಮುಂಬಾಗಿಲಾದ ಶೆರಲುಂಗ್ ಆಶ್ರಮವನ್ನು ಈಗ ತಲಪುತ್ತಾರೆ. ಸರೋವರದ ಪ್ರದಕ್ಷಿಣೆಯ ಸುಂಕವನ್ನು ಇಲ್ಲಿ ನೀಡುತ್ತಾರೆ. ಅನಂತರ ಛಿಯು ಕ್ಯಾಂಪನ್ನು ಸೇರುತ್ತಾರೆ. ಅವರ ಪಯಣದ ಮುಖ್ಯೋದ್ದೇಶದ ಸಮಯ ಈಗ ಒದಗಿಬಂದಿದೆ. ಬದುಕಿನ ಮಹದಾಸೆ ಈಡೇರುವ ಕಾಲ ಸನ್ನಿಹಿತವಾಗಿದೆ. ಕ್ಯಾಂಪಿನಲ್ಲಿ ತಮ್ಮ ವಸ್ತುಗಳನ್ನಿಟ್ಟು ಪವಿತ್ರ ಮಾನಸ ಸರೋವರದಲ್ಲಿ ಸ್ನಾನ ಮಾಡಲು ಅವರು ತಯಾರಾಗುತ್ತಾರೆ. ಶಾಸ್ತ್ರೋಕ್ತವಾಗಿ ಇಲ್ಲಿ ಮಾಡುವ ಸ್ನಾನವು ಸ್ವರ್ಗಕ್ಕೆ ರಹದಾರಿ ಎಂದು ನಂಬಿಕೆ ಇದೆ. ಸರೋವರದ ಒಂದು ಹನಿ ನೀರನ್ನು ಕುಡಿದರೆ ನೂರಾರು ಜನ್ಮಗಳ ಪಾಪ ಪರಿಹಾರವಾಗಿ, ಹುಟ್ಟುಸಾವುಗಳಿಂದ ಮುಕ್ತಿ ಸಿಗುತ್ತದೆ ಎಂದೂ ಹೇಳಲಾಗುತ್ತದೆ. ಕೆಲವು ಯಾತ್ರಿಗಳು ತಮ್ಮ ಪಿತೃಗಳಿಗೆ ಇಲ್ಲಿ ತರ್ಪಣ ನೀಡುತ್ತಾರೆ. ಮಧ್ಯಾಹ್ನ, ಇಲ್ಲಿಯೇ ಸಮೀಪದಲ್ಲಿರುವ ಒಂದು ಆಶ್ರಮಕ್ಕೆ ಭೇಟಿ ನೀಡುತ್ತಾರೆ. ಅಲ್ಲಿ ಅನೇಕ ಜಾತಿಯ ವಲಸೆ ಹಕ್ಕಿಗಳನ್ನು ನೋಡಬಹುದು. (ಮಾನಸ ಸರೋವರದ ಬಳಿ ವಾಸಿಸುತ್ತದೆ ಎನ್ನಲಾಗುವ ರಾಜಹಂಸ ಪಕ್ಷಿಯು ನಮಗಂತೂ ಕಾಣಸಿಗಲಿಲ್ಲ.)

ಸೂರ್ಯನು ಈಗ ಮಾನಸ ಸರೋವರದ ಪಶ್ಚಿಮಾಕಾಶದಲ್ಲಿ ಮುಳುಗುತ್ತಿದ್ದಾನೆ. ಸಂಜೆಯ ಆರಾಧನೆಯನ್ನು ಮುಗಿಸಿದ ಯಾತ್ರಿಗಳು ರಾತ್ರಿಯ ಜಾಗರಣೆಗಾಗಿ ತಯಾರಾಗುತ್ತಾರೆ. ಸರೋವರದಲ್ಲಿ ಬೀಳುವ ನಕ್ಷತ್ರಗಳನ್ನು ವೀಕ್ಷಿಸಲು ಇಡೀ ರಾತ್ರಿ ಎಚ್ಚರವಾಗಿರುತ್ತಾರೆ. ಪ್ರತಿನಿತ್ಯ ಬ್ರಾಹ್ಮೀ ಮುಹೂರ್ತದಲ್ಲಿ ದೇವತೆಗಳು ನಕ್ಷತ್ರಗಳ ರೂಪದಲ್ಲಿ ಇಲ್ಲಿಗೆ ಸ್ನಾನಮಾಡಲು ಬರುತ್ತಾರೆಂಬ ಪ್ರತೀತಿ ಇದೆ.

ಮರುದಿನ ಮಧ್ಯಾಹ್ನದ ವೇಳೆಗೆ ಯಾತ್ರಿಗಳು ಝ್ಯುದಿ ಕ್ಯಾಂಪಿಗೆ ಬರುತ್ತಾರೆ. ಇದು ಮಾನಸ ಸರೋವರದ ಪರಿಕ್ರಮದಲ್ಲಿನ ಮೂರನೆಯ ಕ್ಯಾಂಪ್. ಇಲ್ಲಿ ಅವರು ಎರಡು ರಾತ್ರಿ ತಂಗುತ್ತಾರೆ. ಕೈಲಾಸ ಮತ್ತು ಮಾನಸ ಸರೋವರ – ಈ ಎರಡರ ಅದ್ಭುತ ದೃಶ್ಯಗಳು ಇಲ್ಲಿಂದ ನೋಡಲು ಲಭ್ಯ. ಪೂರ್ವದಲ್ಲಿ ಮೂಡಿಬರುತ್ತಿರುವ ಸೂರ್ಯನ ಕಿರಣಗಳು ಹಿತವೆನಿಸುತ್ತವೆ. ಸರೋವರದ ಅಲೆಗಳ ಮೇಲೆ ಬಿದ್ದ ಸೂರ್ಯಕಿರಣಗಳು ಮುತ್ತಿನಂತೆ ಹೊಳೆಯುತ್ತವೆ. ಸ್ನಾನಕ್ಕಾಗಿ ಬಂದ ದೇವತೆಗಳ ದರ್ಶನ ಆಗದಿದ್ದರೂ, ಸರೋವರದ ಮೇಲೆ ಹೊಳೆಹೊಳೆಯುವ ಹೊನ್ನ ಕಿರಣಗಳು ದೇವತೆಗಳ

